# ಕರ್ನಾಟಕದಲ್ಲಿ ಕ್ರೈಸ್ತ ಧಾರ್ಮಿಕ ಸಂಪ್ರದಾಯ

ಡಾ. ನಾ. ಡಿಸೋಜ



ಬೆಂಗಳೂರಿನ ಹಡ್ಸನ್ ಸ್ಮಾರಕ ದೇವಾಲಯ

**ಕರ್ನಾಟಕದ ಧಾರ್ಮಿಕ ಪರಂಪರೆಗೆ ಇಲ್ಲಿನ ಕ್ರೈಸ್ತ ಸಂಪ್ರದಾಯವು ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ಕೊಟ್ಟಿದೆ. ಸಾಹಿತ್ಯ, ಸೇವೆ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಇದರ ಪಾತ್ರ ಬಹಳ ಮಹತ್ವದ್ದು. ಇದೆಲ್ಲದರ ಬಗ್ಗೆ ಸೋದಾಹರಣ ವಿವರಣೆಯನ್ನು ಸೊಗಸಾಗಿ ಮಾಡಿರುವ ಲೇಖಕರು ಕನ್ನಡದ ಹೆಸರಾಂತ ಕತೆ ಕಾದಂಬರಿಗಾರರು, ಪ್ರಬುದ್ಧ ಲೇಖಕರು.**

**ಭಾ**ರತೀಯ ಸಂಸ್ಕೃತಿಯ ಒಂದು ವಿಶೇಷತೆ ಅಂದರೆ ಅದು ಈ ದೇಶದ್ದಲ್ಲದ, ಈ ದೇಶದ ಮಣ್ಣಿನಲ್ಲಿ ಹುಟ್ಟದ ಧರ್ಮ ಸಂಸ್ಕೃತಿಗಳನ್ನೂ ತನ್ನದೇ ಎಂಬಂತೆ ಒಪ್ಪಿಕೊಳ್ಳುವುದು. ಹೀಗೆ ಅದು ಒಪ್ಪಿಕೊಂಡ ಧರ್ಮ ಸಂಸ್ಕೃತಿಗಳಲ್ಲಿ ಇಸ್ಲಾಂ, ಪಾರಸಿ, ಕ್ರೈಸ್ತಧರ್ಮಗಳು ಪ್ರಮುಖವಾದವುಗಳು. ಕ್ರೈಸ್ತ ಧರ್ಮವಂತೂ ಇಲ್ಲಿಯ ನಂಬಿಕೆ ಆಚರಣೆಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಭಾರತೀಯ ಧರ್ಮವೇ ಆಗಿರುವುದನ್ನು ನಾವು ಗಮನಿಸಬಹುದು.

ದೇವರು ತಂದೆಯಾಗಿ ಈ ಲೋಕವನ್ನು ಸೃಷ್ಟಿ ಮಾಡುತ್ತಾನೆ. ಅಂತೆಯೇ ಈ ಲೋಕದ ಒಳಿತಿಗಾಗಿ ಶ್ರಮಿಸುತ್ತಾನೆ. ಇಲ್ಲಿಯ ಜನ ಸುಖ, ಶಾಂತಿ, ನೆಮ್ಮದಿ, ಪ್ರೀತಿಯಿಂದ ಬದುಕಬೇಕು ಎನ್ನುವುದು ದೇವರ ಇಚ್ಛೆ. ಈ ಕಾರಣಕ್ಕೆ ಆತ ಹಲವು ಪ್ರಯತ್ನಗಳನ್ನು ಮಾಡುತ್ತಾನೆ. ಈ ಪ್ರಯತ್ನದಲ್ಲಿ ಏಸುವಿನ ಜನನವೂ ಒಂದು. ಏಸು ಹುಟ್ಟಿ ದೇವರ ಉದ್ದೇಶವನ್ನು ನೆರವೇರಿಸಲು ಒಂದು ಜೀವನವಿಧಾನವನ್ನು ಜನರ ಮುಂದಿಡುತ್ತಾನೆ. ಅದೇ ಕ್ರೈಸ್ತ ಧರ್ಮ.

ಮಾಡಿದ ಪಾಪಗಳ ಕುರಿತು ಪಶ್ಚಾತ್ತಾಪಪಡುವುದು, ದೀನರ ಸೇವೆಯನ್ನೇ ದೇವರ ಸೇವೆಯೆಂದು ತಿಳಿಯುವುದು, ತಪ್ಪು ಮಾಡಿದವರನ್ನು ಕ್ಷಮಿಸುವುದು – ಇವೆಲ್ಲಾ ಕ್ರೈಸ್ತಧರ್ಮದ ಕೆಲವು ನಂಬಿಕೆಗಳು. ಅಲ್ಲದೆ ಶಾಂತಿ, ಪ್ರೇಮ, ಕರುಣೆ, ದಯೆ, ಸೇವೆ ಇವು ಕ್ರೈಸ್ತಧರ್ಮದ ಹಲವು ಅಂಗಗಳು ಅನ್ನುವ ನಂಬಿಕೆ ಜನರಲ್ಲಿ ಬೆಳೆಯಿತು. ಕ್ರಿಸ್ತನ ಅನುಯಾಯಿಗಳು ಈ ಎಲ್ಲ ಅಂಶಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಜನರ ಗಮನವನ್ನು ತಮ್ಮತ್ತ ಸೆಳೆದುಕೊಂಡರು. ಅಲ್ಲದೆ ಕೇವಲ ಆಚರಣೆ, ಪದ್ಧತಿ ಇವುಗಳಿಗೆ ಮಾತ್ರ ಪ್ರಾಮುಖ್ಯತೆಯನ್ನು ನೀಡಬೇಡಿ ಅನ್ನುತ್ತಿದ್ದ ಏಸು. ತಾನು ಹೇಳಿದಂತೆ ನಡೆಯುವವರು ಮಾತ್ರ ದೇವರ ರಾಜ್ಯಕ್ಕೆ ಅರ್ಹರಾಗುತ್ತಾರೆ ಅನ್ನುವುದು ಅವನ ಉಪದೇಶವಾಗಿತ್ತು. ಇದು ಕೂಡ ಇತರರನ್ನು ಆಕರ್ಷಿಸಲು ಕಾರಣವಾಯಿತು.

ಏಸುಕ್ರಿಸ್ತ ತಮ್ಮನ್ನು ಪಾಪದಿಂದ ಬಿಡುಗಡೆ ಮಾಡಲು ಬಂದ ರಕ್ಷಕನೆಂದು ಕ್ರೈಸ್ತರು ನಂಬುತ್ತಾರೆ. ಬೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿ ಮಾನವನನ್ನು ರಕ್ಷಿಸಲು ದೇವರು ಓರ್ವ ರಕ್ಷಕನನ್ನು ಕಳುಹಿಸುತ್ತಾನೆ ಎಂಬ ಮಾತಿದೆ. ಈ ರಕ್ಷಕನೇ ಏಸು ಎಂಬುದು ಕ್ರೈಸ್ತರ ನಂಬಿಕೆ. ಅಲ್ಲದೆ ಬೈಬಲಿನ ಪ್ರಕಾರ ಏಸುವಿಗೆ "ದೇವರಿಂದ ಅಭಿಷೇಕ ಮಾಡಲ್ಪಟ್ಟ ವ್ಯಕ್ತಿ" ಎಂಬ ಮಾತಿದೆ. ಅಂದರೆ ಈತ ದೇವರಿಂದಲೇ ಆರಿಸಲ್ಪಟ್ಟವನು ಎಂದರ್ಥ.

ಕ್ರೈಸ್ತಧರ್ಮ ತ್ರೀತ್ವದ ಮೇಲೆ ನಂಬಿಕೆ ಇಡುವ ಒಂದು ಧರ್ಮ. **ತಂದೆ, ಮಗ ಮತ್ತು ಸ್ಪಿರಿತು ಸಾಂತ** ಈ ಧರ್ಮದ ಮೂರು ಆಧಾರ ಸ್ತಂಭಗಳು. **ಪರಲೋಕದಲ್ಲಿರುವ ತಂದೆ,** ಆತನ ಉದ್ದೇಶವನ್ನು ನೆರವೇರಿಸಲು ಭೂಮಿಗೆ ಬಂದ **ಏಸು.** ಜಗತ್ತಿನ ಪ್ರತಿಯೊಬ್ಬರ ರಕ್ಷಣೆಯನ್ನು ಮಾಡುವ **ಸ್ಪಿರಿತು ಸಾಂತ** ಈ ಮೂವರನ್ನು ಕ್ರೈಸ್ತರು ನಂಬುತ್ತಾರೆ. ಅಲ್ಲದೆ ಮರಣಾನಂತರದ ಪುನರುತ್ಥಾನದಲ್ಲಿ ಇವರಿಗೆ ನಂಬಿಕೆ. ಏಸು ಕೂಡ ಶಿಲುಬೆಯ ಮೇಲೆ ಪ್ರಾಣವನ್ನು ಅರ್ಪಿಸಿದ ಮೂರನೇ ದಿನ ಮತ್ತೆ ಹುಟ್ಟಿ ಬರುತ್ತಾನೆ. ಈ ಪುನರುತ್ಥಾನದ ನಂತರವೇ ಅಂತಿಮ ವಿಚಾರಣೆಯಾಗಿ ಎಲ್ಲರಿಗೆ ಮೋಕ್ಷ ಸಿಗುತ್ತದೆಂದು ಕ್ರೈಸ್ತರ ವಿಶ್ವಾಸ.

ಕ್ರಿಸ್ತನ ನಂತರ ಅವನ ಧರ್ಮವನ್ನು ಪ್ರಚುರಪಡಿಸಿದವರು ಅವನ ಶಿಷ್ಯರು. ಈ ಕೆಲಸ ಕೂಡ ಅವರ ಪಾಲಿಗೆ ತುಂಬಾ ತ್ರಾಸದಾಯಕವಾಗಿತ್ತು. ರೋಮನ್ ದೊರೆಗಳ ವಿರೋಧದ ನಡುವೆ ಅವರು ದೊಡ್ಡ ಹೋರಾಟವನ್ನೇ ಮಾಡಿದರು.


ಕ್ರೈಸ್ತ ಯುಗದ ಆರಂಭದಲ್ಲಿಯೇ ಕ್ರೈಸ್ತಧರ್ಮ ಭಾರತಕ್ಕೆ ಬಂತೆಂಬ ಹೇಳಿಕೆ ಇದೆ. ಕ್ರಿಸ್ತನ ಹನ್ನೆರಡು ಜನ ಶಿಷ್ಯರಲ್ಲಿ ಓರ್ವನಾದ ಸಂತ ಥಾಮಸನು ಮಲಬಾರಿನ ತೀರ ಪ್ರದೇಶಕ್ಕೆ ಬಂದು ಕ್ರೈಸ್ತ ಮತವನ್ನು ಪ್ರಚಾರಮಾಡಿದ ಎಂದು ಹೇಳುತ್ತಾರೆ. ನಂತರ ೫ ನೇ ಶತಮಾನದ ಸುಮಾರಿಗೆ ವಿದೇಶಿ ಮಿಷನರಿಗಳು ಇಲ್ಲಿಗೆ ಬಂದು ಧರ್ಮಪ್ರಚಾರವನ್ನು ಆರಂಭಿಸಿದರು. ಅಲ್ಲದೆ ಪೋರ್ಚುಗೀಸರು, ಇಂಗ್ಲಿಷರು, ಡಚ್ಚರು ಭಾರತಕ್ಕೆ ಬಂದು ತಮ್ಮ ಚಟುವಟಿಕೆಗಳನ್ನು ಪ್ರಾರಂಭಿಸಿದ ನಂತರ, ಕ್ರೈಸ್ತ ಧರ್ಮಕ್ಕೆ ಇಲ್ಲಿ ಒಂದು ಉತ್ತಮ ವೇದಿಕೆ ಸಿದ್ಧವಾಗಿ ಆ ಧರ್ಮ ಇಲ್ಲಿ ಬೇರೂರಲು ಕಾರಣವಾಯಿತು. ನಂತರದ ಶತಮಾನಗಳಲ್ಲಿ ಕ್ರೈಸ್ತ ಧರ್ಮ ಭಾರತೀಯ ಧರ್ಮವೇ ಅನ್ನುವ ಹಾಗೆ ಇಲ್ಲಿ ಬೆಳೆಯಿತು.

ಬೇರೆಲ್ಲ ಧರ್ಮಗಳ ಹಾಗೆಯೇ ಈ ಧರ್ಮದಲ್ಲಿ ಕೂಡ ಹಲವು ಪಂಥಗಳು, ಸಿದ್ಧಾಂತಗಳು ಕಾಣಿಸಿಕೊಂಡವು. ಕ್ರೈಸ್ತ ಧರ್ಮ ರೋಮನ್ ಕ್ಯಾಥೊಲಿಕ್, ಸಿರಿಯನ್, ಪ್ರಾಟೆಸ್ಟಂಟ್ ಎಂದೆಲ್ಲಾ ಬೇರೆ ಬೇರೆ ಪಂಗಡಗಳಾಗಿ ಒಡೆದುಕೊಂಡಿತು. ಪ್ರಾಟೆಸ್ಟಂಟ್ ಪಂಥವು 'ದಕ್ಷಿಣ ಭಾರತ ಸಭಾ' ಅನ್ನುವ ಹೆಸರಿನಲ್ಲಿ (ಚರ್ಚ್ ಆಫ್ ಸೌತ್ ಇಂಡಿಯಾ) ಕರ್ನಾಟಕದಲ್ಲಿ ಕೆಲಸ ಮಾಡಿತು. ಹಾಗೆಯೇ ಇಲ್ಲಿಯ ಬಾಸೆಲ್ ಮಿಷನ್, ವೆಸ್ಲಿ ಮಿಷನ್, ಆ್ಯಂಗ್ಲಿಕನ್, ಬಾರ್ತೊಮಾ, ಮೆಥಾಡಿಸ್ಟ್, ಪೆಂಟೆ ಕೋಸ್ಟ್ ಎಂದೆಲ್ಲ ಹಲವು ಮಿಷನರಿ ಸಂಸ್ಥೆಗಳು ವಿದ್ಯಾಕ್ಷೇತ್ರದಲ್ಲಿ ಕೆಲಸ ಮಾಡುತ್ತ ಬಂದಿವೆ. ಅಂತೆಯೇ ರೋಮನ್ ಕ್ಯಾಥೋಲಿಕ್ ಪಂಥ ಕೂಡ ವೈದ್ಯಕೀಯ, ಶಿಕ್ಷಣ ಮತ್ತಿತರ ಕ್ಷೇತ್ರಗಳಲ್ಲಿ ಸೇವೆಮಾಡಿಕೊಂಡು ಬರುತ್ತಿದೆ.

ಕರ್ನಾಟಕದ ಗ್ರಾಮೀಣ ಭಾಗದ ಜನರ ಬದುಕನ್ನು ರೂಪಿಸಲು ಈ ಮಿಷನ್ನುಗಳು ಶ್ರಮಿಸಿದವು. ಜನರ ಆರೋಗ್ಯ, ಗ್ರಾಮ ನೈರ್ಮಲ್ಯ, ಸ್ತ್ರೀಯರ ಶಿಕ್ಷಣ ಹೀಗೆ ಬೇರೆ ಯಾರೂ ತಲುಪದ ಗುರಿಗಳನ್ನು ಈ ಜನ ತಲುಪಿದರು.

ಕರ್ನಾಟಕದ ಕ್ರೈಸ್ತ ಮಿಷನರಿಗಳು ಕನ್ನಡ ಭಾಷೆಗೆ ಸಲ್ಲಿಸಿದ ಸೇವೆಯನ್ನು ಎಲ್ಲರೂ ಗುರುತಿಸಿದ್ದಾರೆ. ಕಾವ್ಯಗಳ ಸಂಪಾದನೆ, ಪ್ರಕಟಣೆ, ಕನ್ನಡ ಭಾಷೆಗೆ ಮಿಷನರಿಗಳು ನೀಡಿದ ಕೊಡುಗೆ ಎಂದೇ ಪರಿಗಣಿಸಲಾಗಿದೆ. ಅಲ್ಲದೆ ಕನ್ನಡದಲ್ಲಿ ಮೊತ್ತಮೊದಲಿಗೆ ವಾರ್ತಾಪತ್ರಿಕೆಗಳನ್ನು ಹೊರತರುವ ಕೆಲಸವನ್ನು ಕೂಡ ಮಾಡಿದವರು ಈ ಪಾದ್ರಿಗಳೇ.

ಪಾದ್ರಿ ಚಿನಾಮಿ, ಬಿಷಪ್ ಶಾರ್ಬಾನೋ, ಲೂಯಿ ರೈಸ್, ಕಿಟೆಲ್ ಮೊದಲಾದ ವಿದೇಶಿ ಪಾದ್ರಿಗಳ ಕನ್ನಡ ಸೇವೆ ಗಣನೀಯವಾದದ್ದು. ಇವರ ಜೊತೆಗೆ ರೆವರೆಂಡ್ ಉತ್ತಂಗಿ




ಚೆನ್ನಪ್ಪರಂಥ ಸ್ಥಳೀಯ ವಿದ್ವಾಂಸರು ಕೂಡ ಕನ್ನಡದ ಸೇವೆಗೆ ನಿಂತರು. ೧೯ ಮತ್ತು ೨೦ ನೇ ಶತಮಾನದಲ್ಲಿ ಕ್ರೈಸ್ತ ಪಾದ್ರಿಗಳು ಸಲ್ಲಿಸಿದ ಕನ್ನಡದ ಸೇವೆ ಅನುಪಮವಾದದ್ದು. ಇಂದಿಗೂ ಕೂಡ ರೆವರೆಂಡ್ ಜೋಗುಳ, ಬಿ.ಎಸ್. ತಲ್ವಾಡಿ, ಸ್ವಾಮಿ, ವಿಲಿಯಂ, ಫಾದರ್ ಅಂತಪ್ಪ, ದಯಾನಂದ ಪ್ರಭು, ಪ್ರಶಾಂತ ಮಾಡ್ತ, ಮೇರಿ ಜೋ ಲೋಬೋ, ನಾ. ಡಿಸೋಜ ಮೊದಲಾದ ಲೇಖಕರು ಕ್ರೈಸ್ತ ಧಾರ್ಮಿಕ ಸಾಹಿತ್ಯವನ್ನೇ ಅಲ್ಲದೆ ಇತರೇ ಸಾಹಿತ್ಯವನ್ನೂ ಕೂಡ ನಿರ್ಮಿಸುತ್ತಿದ್ದಾರೆ.

ಮುದ್ರಣ ಯಂತ್ರಕ್ಕೆ ಬೇಕಾದ ಮೊಳೆಗಳನ್ನು ಬಳಕೆಗೆ ತರುವುದರ ಜೊತೆಯಲ್ಲಿ ದಕ್ಷಿಣಕನ್ನಡದಲ್ಲಿ ಹಂಚಿನ ಉದ್ಯಮವನ್ನು ಮಿಷನರಿಗಳು ಬೆಳೆಸಿದರು. ಮಂಗಳೂರಿನ ಬಾಸೆಲ್ ಮಿಷನ್ನಿನವರು ಖಾಕಿ ಬಟ್ಟೆಯನ್ನು ಉತ್ಪಾದಿಸುವುದರ ಮೂಲಕ ನಮ್ಮ ಪೋಲೀಸರಿಗೆ, ಸರಕಾರಿ ನೌಕರರಿಗೆ ಒಂದು ಸಮವಸ್ತ್ರ ದೊರಕಿಸಿಕೊಡಲು ಶ್ರಮಿಸಿದರು. ಇದರ ಜೊತೆಯಲ್ಲಿ ಕನ್ನಡಿಗರ ಬದುಕನ್ನು ಕಟ್ಟುವ ಕೆಲಸವನ್ನು ಕೂಡ ಇವರು ಮಾಡಿದರು.

ಇಗರ್ಜಿಗಳಲ್ಲಿ ಕನ್ನಡ, ಕೊಂಕಣಿ, ತುಳು ಭಾಷೆಗಳನ್ನು ಜನಪ್ರಿಯಗೊಳಿಸಿದರು. ಈ ಭಾಷೆಗಳಲ್ಲಿ ಇವರು ಪ್ರಾರ್ಥನಾ ಗೀತೆಗಳನ್ನು ರಚಿಸಿದರು. ದೇವರ ಆರಾಧನೆಗೆ ಬೇಕಾದ ಭಾಷಾ ಹಿನ್ನೆಲೆಯನ್ನು ಅವರು ಒದಗಿಸಿಕೊಟ್ಟರು. ನೂರಾರು ಭಕ್ತಿಗೀತೆಗಳು ಸ್ಥಳೀಯ ಭಾಷೆಗಳಲ್ಲಿ ಹೊರಬರಲು ಮಿಷನರಿಗಳು ಕಾರಣರಾದರು. ಕೆಲವೆಡೆಗಳಲ್ಲಿ ಕೊಂಕಣಿಯಂಥ ಸ್ಥಳೀಯ

ಭಾಷೆಯ ಬಳಕೆಗೆ ವಿರೋಧವಿದ್ದರೂ ಆ ಭಾಷೆ ಸಾಯಲಿಲ್ಲ ಎನ್ನುವುದು ವಿಶೇಷ.

ಗೋವೆಯಲ್ಲಿ ಇಂಕ್ವಿಜಿಶನ್‌ನಂಥ (ಧಾರ್ಮಿಕ ವಿಚಾರಣೆ) ಕ್ರೂರ ಪದ್ಧತಿಗಳು ಇದ್ದರೂ ಜನ ತಮ್ಮ ಹಿಂದಿನ ಪದ್ಧತಿಗಳ ಆಚರಣೆಗಳನ್ನು ಬಿಡಲಿಲ್ಲ ಎನ್ನುವುದನ್ನು ನಾವು ಗಮನಿಸಬೇಕು.

ಕೆಲ ಕ್ರೈಸ್ತ ಕುಟುಂಬಗಳು ತಮ್ಮನ್ನು ಆಳುತ್ತಿದ್ದ ಆಂಗ್ಲರನ್ನು ಅನುಕರಿಸುವ ಭರದಲ್ಲಿ ಇಲ್ಲಿಯ ಭಾಷೆಯನ್ನು ಕೈಬಿಟ್ಟರೂ ಬಹುತೇಕ ಕ್ರೈಸ್ತರು ಭಾರತೀಯರಾಗಿಯೇ ಉಳಿದರು. ಹೀಗಾಗಿ ಕ್ರೈಸ್ತರ ಹಬ್ಬ ಜಾತ್ರೆಗಳಿಗೆ ಭಾರತೀಯ ರೂಪ ಬಂದಿತು.

ಸುಗ್ಗಿಯ ಕಾಲದ ಹೊಸ ಪೈರಿನ ಹಬ್ಬ, ಮದುವೆಗಳಲ್ಲಿಯ ಆಚರಣೆಗಳು, ಹಾಡು ಹಸೆ, ಮಗುವಿನ ತೊಟ್ಟಿಲು ಶಾಸ್ತ್ರ ಮುಂತಾದ ಹಲವಾರು ಆಚರಣೆಗಳಲ್ಲಿ ಭಾರತೀಯ ನಂಬಿಕೆಯನ್ನು ಕ್ರೈಸ್ತರು ಉಳಿಸಿಕೊಂಡು ಬಂದರು. ಚರ್ಚುಗಳಲ್ಲಿ ನಡೆಯುವ ಎಲ್ಲ ವಿಧಿವಿಧಾನಗಳೂ ವಿದೇಶೀಯ ರೂಪವನ್ನು ಹೊಂದಿದ್ದರೆ, ಮನೆಯ ಆಚರಣೆಗಳೆಲ್ಲವೂ ಭಾರತೀಯವಾಗಿಯೇ ಉಳಿದವು. ವಧುವಿಗೆ ವರ ಕಟ್ಟುವ ತಾಳಿ ತನ್ನ ಮಹತ್ವವನ್ನು ಕಳೆದುಕೊಳ್ಳಲಿಲ್ಲ.

**ಹೊಸ ಮನೆ ಪ್ರವೇಶದ ಸಂದರ್ಭದಲ್ಲಿ ಹಾಲು ಉಕ್ಕಿಸುವುದು, ಮದುವೆಯ ಸಮಯದಲ್ಲಿ ಮನೆಯ ಮುಂದೆ ಚಪ್ಪರದ ಕಂಬ ನೆಡುವುದು, ತಾಳಿಯಲ್ಲಿ ಕರಿಮಣಿ ಇರಿಸುವುದು, ದೃಷ್ಟಿ ತೆಗೆಯುವುದು ಮೊದಲಾದ ಹಲವು ಪದ್ಧತಿಗಳನ್ನು ಕ್ರೈಸ್ತರು ಬಿಡಲಿಲ್ಲ. ಇಲ್ಲಿರುವ ಎಲ್ಲ ಕ್ರೈಸ್ತರೂ ಮೂಲತಃ ಹಿಂದುಗಳೇ ಆಗಿರುವುದರಿಂದ ಅವರು ಹಿಂದಿನ ಆಚರಣೆಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಪಾದ್ರಿಗಳು ಈ ಆಚರಣೆಗಳನ್ನು ಖಂಡಿಸಿದರೂ ಕೂಡ ಇವು ಮುಂದುವರಿಯುತ್ತಿರುವುದು ಗಮನಾರ್ಹ.**

ಅಲ್ಲದೆ ಹಬ್ಬಗಳು ತಮ್ಮ ಮಹತ್ವವನ್ನು ಉಳಿಸಿಕೊಂಡು ಬಂದವು. ಹಬ್ಬದ ಸಂದರ್ಭದಲ್ಲಿ ದೇವರ ಪ್ರತಿಮೆಯ ಮೆರವಣಿಗೆ, ಚರ್ಚಿನ ಸುತ್ತ ಜಾತ್ರೆ, ಅಂಗಡಿಗಳು, ಪರ ಊರುಗಳಿಂದ ಜನ ಬರುವುದು, ನೆಂಟರ ಆಗಮನ, ಹರಕೆ, ಕೂದಲು ತೆಗೆಸುವುದು, ಉರುಳು ಸೇವೆ, ಮೇಣ, ಬೆಳ್ಳಿ, ಚಿನ್ನದ ಪ್ರತಿಮೆ, ಕಾಲು ಕೈಗಳನ್ನು ದೇವರಿಗೆ ಅರ್ಪಿಸುವುದು ಇತ್ಯಾದಿ ಭಾರತೀಯ ನಂಬಿಕೆಗಳು ಧಾರಾಳವಾಗಿ ಕ್ರೈಸ್ತರ ಬದುಕಿನಲ್ಲಿ ಉಳಿದುಬಂದವು.

ಎಲ್ಲ ಕ್ರೈಸ್ತರೂ ಆಚರಿಸುವ ಕ್ರಿಸ್‌ಮಸ್, ಹೊಸ ವರ್ಷ, ಏಸುವಿನ ಪುನರುತ್ಥಾನದ ಹಬ್ಬ ಇವುಗಳ ಜೊತೆಗೆ ರೋಮನ್ ಕ್ಯಾಥೋಲಿಕರು ಆಚರಿಸುವ ಸಂತರ ಹಬ್ಬಗಳು, ಚರ್ಚಿನ ಸ್ಥಾಪನಾ ದಿನಗಳು ಇತ್ಯಾದಿಗಳ ಹಿಂದೆ ಭಾರತೀಯ ಪದ್ಧತಿ ಇರುವುದನ್ನು ಗಮನಿಸಬಹುದು.

ರೋಮನ್ ಕ್ಯಾಥೋಲಿಕರಿಗೆ ಮೈಸೂರು, ಬೆಂಗಳೂರು, ಮಂಗಳೂರು, ದೋರ್ನಳ್ಳಿ, ಕಾರ್ಕಳ ಮೊದಲಾದವುಗಳು ಯಾತ್ರಾಸ್ಥಳಗಳಾದರೆ, ಪ್ರಾಟೆಸ್ಟಂಟರಿಗೆ ಉತ್ತರ ಕರ್ನಾಟಕದಲ್ಲಿ ಕೆಲ ಯಾತ್ರಾಸ್ಥಳಗಳು ಇವೆ. ಜೊತೆಗೆ ಉತ್ತರ ಕರ್ನಾಟಕದಲ್ಲಿ ಇವರ ಕೆಲವು ಜಾತ್ರೆಗಳು ಜನಪ್ರಿಯವಾಗಿದ್ದು, ಅಲ್ಲಿಗೆ ಹೋಗುವ ಜನ ಈ ಜಾತ್ರೆಗಳಲ್ಲಿ ಭಾಗವಹಿಸುವುದರ ಮೂಲಕ ದಿನವೆಲ್ಲ ಭಜನೆ, ಹಾಡುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಭಕ್ತಿಯನ್ನು ಪ್ರದರ್ಶಿಸುತ್ತಾರೆ.

ಕರ್ನಾಟಕದಾದ್ಯಂತ ಕ್ರೈಸ್ತರ ದೇವಾಲಯಗಳ ಒಂದು ಭವ್ಯ ಪರಂಪರೆಯೇ ಇದೆ. ಈ ಚರ್ಚುಗಳು ಆಕಾರದಲ್ಲಿ ಒಳಗಿನ ಕಟ್ಟೋಣದ ಮೂಲಕ ವಿದೇಶೀಯ ಪದ್ಧತಿಗಳ ಪರಿಚಯವನ್ನು ಮಾಡಿಕೊಟ್ಟರೂ ಕೂಡ, ಇವು ಒಂದು ಪರಂಪರೆಯನ್ನು ಇಲ್ಲಿ ಹುಟ್ಟುಹಾಕಿವೆ. ಮೈಸೂರಿನ ಸಂತ ಫಿಲೋಮಿನಾ ದೇವಾಲಯ, ಬೆಂಗಳೂರಿನ ಬಾಲ ಏಸು ದೇವಾಲಯ, ಬೆಂಗಳೂರಿನ ಹಡ್ಸನ್ ಸ್ಮಾರಕ ದೇವಾಲಯ, ಮಂಗಳೂರಿನ ಸಂತ ರೊಜಾರಿಯೋ ಇವೆಲ್ಲ ಒಂದು ಪದ್ಧತಿಗೆ ಕಾರಣವಾಗಿವೆ. ಈಗ ಹೊಸದಾಗಿ ಅಲ್ಲಲ್ಲಿ ಎದ್ದು ನಿಲ್ಲುತ್ತಿರುವ ದೇವಾಲಯಗಳು ಈ ಪದ್ಧತಿಯನ್ನು ಅನುಸರಿಸುತ್ತಿವೆ. ಕರ್ನಾಟಕದ ಈ ದೇವಾಲಯಗಳು ಗಾಥಿಕ್ ಮೊದಲಾದ ವಿದೇಶೀ ಶಿಲ್ಪಶೈಲಿಯನ್ನು ಕರ್ನಾಟಕಕ್ಕೆ ಪರಿಚಯ ಮಾಡಿಕೊಟ್ಟಿದ್ದು ಒಂದು ವಿಶೇಷ.

ಈ ನಾಡನ್ನು ಆಳಿದ ದೊರೆಗಳು ಇಲ್ಲಿಯ ಕ್ರೈಸ್ತರ ದೇವಾಲಯಗಳಿಗೆ ದಾನ ದತ್ತಿಗಳನ್ನು ನೀಡಿದ್ದು ಉಲ್ಲೇಖಾರ್ಹವಾಗಿದೆ. ಮಂಗಳೂರಿನ ಸಂತ ರೋಜಾರಿಯೋ ದೇವಾಲಯಕ್ಕೆ ಇಕ್ಕೇರಿಯ ರಾಣಿ ಚೆನ್ನಮ್ಮ ಭೂದಾನ ಮಾಡಿದ ಬಗ್ಗೆ ಉಲ್ಲೇಖವಿದೆ. ಹಾಗೆಯೇ ಮೈಸೂರಿನ ದೊರೆಗಳು ಅಲ್ಲಿಯ ಸಂತ ಫಿಲೋಮಿನಾ ದೇವಾಲಯಕ್ಕೆ ಎಲ್ಲ ಪ್ರೋತ್ಸಾಹವನ್ನು ನೀಡುತ್ತಿದ್ದ ಬಗ್ಗೆಯೂ ಆಧಾರಗಳಿವೆ.

ಗೋವೆಯ ದೇವಾಲಯಗಳ ಬಗ್ಗೆ ಒಂದು ಮಾತನ್ನು ಇಲ್ಲಿ ಹೇಳಿದರೆ ತಪ್ಪಾಗಲಿಕ್ಕಿಲ್ಲ. ಗೋವಾದ ಎಲ್ಲ ಚರ್ಚುಗಳೂ ಸುಂದರವಾಗಿ, ಶುಚಿಯಾಗಿ, ಅಚ್ಚುಕಟ್ಟಾಗಿ ಇವೆ. ಅಂತೆಯೇ ಬೇರೆಬೇರೆ ಧಾರ್ಮಿಕ ಸಂಘಸಂಸ್ಥೆಗಳು ಇಂದು ಸೇವಾಕಾರ್ಯದಲ್ಲಿ ತೊಡಗಿಕೊಳ್ಳಲು ಕ್ರೈಸ್ತ ಸಂಘ ಸಂಸ್ಥೆಗಳ ಸೇವಾ ಮನೋಭಾವವೇ ಕಾರಣ ಎಂಬುದನ್ನು ಅಲ್ಲಗಳೆಯಲಾಗದು.

ಕ್ರೈಸ್ತರು ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಇದೀಗ ಭಾಗವಹಿಸುತ್ತಿದ್ದು ಕಲೆ, ಸಾಹಿತ್ಯ, ಸಂಗೀತ, ನೃತ್ಯ ಮೊದಲಾದ ಕಲಾ ಮಾಧ್ಯಮಗಳ ಬೆಳವಣಿಗೆಗೆ ಕಾರಣರಾಗಿದ್ದಾರೆ. ಎಂದಿನಂತೆ ಶಿಕ್ಷಣ, ವೈದ್ಯಕೀಯ ಮೊದಲಾದ ರಂಗಗಳಲ್ಲಿ ಇವರು ಸಲ್ಲಿಸುತ್ತಿರುವ ಸೇವೆ ಕೂಡ ಗಣನೀಯವಾದದ್ದು.

ಹೀಗೆ ಕ್ರೈಸ್ತಧರ್ಮ ಮತ್ತು ಪಂಗಡಗಳು ಕರ್ನಾಟಕದ ಆಧ್ಯಾತ್ಮಿಕ ಪರಂಪರೆಯ ಅವಿಭಾಜ್ಯ ಅಂಗವಾಗಿವೆ. ಆ ಮೂಲಕ ಕನ್ನಡ ನಾಡು ಸಂಸ್ಕೃತಿಗಳಿಗೆ ಗಣನೀಯ ಸೇವೆ ಸಲ್ಲಿಸಿವೆ.